# ಉಡುಪು, ಒಡವೆಗಳಲ್ಲಿ ಟ್ರೈಬಲ್ ಟ್ರೆಂಡ್

ಫ್ಯಾಷನ್ ಜಗತ್ತಿನ ಹರವು ವಿಸ್ತಾರವಾಗಿದೆ. ಈಗೀಗ ಟ್ರೈಬಲ್ ಚಹರೆ ಇರುವ ಪ್ರಿಂಟ್, ಕುಸುರಿ, ಬಳೆ, ಕತ್ತಿನ ಹಾರ, ಕಾಲ್ಗೆಜ್ಜೆ, ಟ್ಯಾಟೂಗಳೆಲ್ಲ ಗಮನಸೆಳೆಯುತ್ತಿವೆ. ಈ ವರ್ಣಮಯ ಲೋಕದಲ್ಲಿ ಏನಿದೆ? ಎಂದು ಕೇಳುವುದಕ್ಕಿಂತ ಏನಿಲ್ಲ ಎಂದು ಹೇಳುವುದು ಹೆಚ್ಚು ಸೂಕ್ತ.

**■ ರೂಪಾ ಕೆ.ಎಂ.**



ಹಳತಿಗೆ ಮರಳುವುದು, ಅದರಲ್ಲಿಯೇ ಹೊಸತನವನ್ನು ತರುವುದೆಲ್ಲ ಫ್ಯಾಷನ್ ಲೋಕದಲ್ಲಿ ಸದಾ ಚಲಾವಣೆಯಲ್ಲಿರುವ ಸೂತ್ರ. ನಾಗರಿಕತೆ ಎಂಬ ಆವರಣಕ್ಕೆ ದಕ್ಕುವ ಮುನ್ನ ಬುಡಕಟ್ಟಿನ ಸಂಸ್ಕೃತಿಯ ಕ್ಯಾನ್‌ವಾಸ್ ಸ್ವಲ್ಪ ಹಿರಿದೇ ಆಗಿತ್ತು. ಶಿಷ್ಟತೆ ರೂಢಿಸಿಕೊಂಡಂತೆ ಬುಡಕಟ್ಟು ಸಂಸ್ಕೃತಿ, ಕಲೆ, ಉಡುಗೆ–ತೊಡುಗೆಗಳು ಹಿನ್ನೆಲೆಗೆ ಸರಿದವು. ಆದರೆ, ಈ 'ಫ್ಯಾಷನ್' ಎಂಬ ಮಾಯಾ ಜಾದೂ ಮತ್ತೆ ಅವೆಲ್ಲವನ್ನು ತನ್ನ ಮುಂದೆ ಹರವಿಕೊಂಡು ಯುವಮನಸ್ಸಿನ ವಿನ್ಯಾಸಕ್ಕೆ ತಕ್ಕಂತೆ ಅದನ್ನು ನೇಯ್ಗೆ ಮಾಡಿ ಹೊಸ ಟ್ರೆಂಡ್ ಅನ್ನೇ ಸೃಷ್ಟಿಸುತ್ತಿದೆ.

ಜಗತ್ತಿನಾದ್ಯಂತ ಹಲವು ಬುಡಕಟ್ಟು ಸಂಪ್ರದಾಯಗಳು, ಉಡುಗೆ–ತೊಡುಗೆಗಳು ಚಾಲ್ತಿಯಲ್ಲಿವೆ. ಮೂಲದಲ್ಲಿ ಅವೆಲ್ಲವೂ ಒಂದು ನಿರ್ದಿಷ್ಟ ಶಿಸ್ತಿಗೆ ಒಳಪಟ್ಟಿದೆ.



ಅದೇನೆಂದರೆ ಗಾಢ ಬಣ್ಣ ಮತ್ತು ಸೃಷ್ಟಿಯಲ್ಲಿರುವ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ತಮ್ಮ ವಿನ್ಯಾಸದಲ್ಲಿ ಅಳವಡಿಸಿಕೊಂಡಿರುವುದು. ಈಗೀಗ ಟ್ರೈಬಲ್ ಚಹರೆ ಇರುವ ಪ್ರಿಂಟ್, ಕುಸುರಿ, ಬಳೆ, ಕತ್ತಿನ ಹಾರ, ಕಾಲ್ಗೆಜ್ಜೆ, ಟ್ಯಾಟೂಗಳೆಲ್ಲ ಗಮನ ಸೆಳೆಯುತ್ತಿವೆ. ವರ್ಣಮಯ ಈ ಲೋಕದಲ್ಲಿ ಏನಿದೆ? ಎಂದು ಕೇಳುವುದಕ್ಕಿಂತ ಏನಿಲ್ಲ ಎಂದು ಹೇಳುವುದು ಹೆಚ್ಚು ಸೂಕ್ತ.

## ಟ್ರೈಬಲ್ ಕಸೂತಿಯ ಬಟ್ಟೆಗಳು

ಈ ಬಟ್ಟೆಯ ಮೂಲ ಗುಣವೇ ಗಾಢ ಬಣ್ಣ. ಕೆಂಪು, ಕೇಸರಿ, ಹಳದಿ, ಗಾಢನೀಲಿ ಹಾಗೂ ಮೆರುಗನ್ನು ಹೆಚ್ಚಿಸುವ ಕಪ್ಪು ಬಣ್ಣವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಅಮೂರ್ತ ಕಲೆಯ ಜತೆ ಸಿಂಹ, ಹುಲಿ, ಜಿಂಕೆ, ಝೀಬ್ರಾ, ಚಿರತೆ, ಅಮೀಬಾ, ಚಿಟ್ಟೆ... ಹೀಗೆ